**ಮಾನ್ಯ ವಿಧಾನ ಪರಿಷತ್ತಿನ್ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ . ಕೆ ಇವರು ನಿಯಮ-72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**-: ಸೂಚನೆ :-**

ಕಂದಾಯ ಇಲಾಖೆಯ ಮಹತ್ವಾಕಾಂಕ್ಷಿ 'ದರ್ಖಾಸ್ತು ಪೋಡಿ ದುರಸ್ತಿ' ಅಭಿಯಾನಕ್ಕೆ ಹತ್ತು ಹಲವು ವಿಘ್ನಗಳು ಎದುರಾಗಿದ್ದು ಹಲವಾರು ತೊಡಕುಗಳ ಕಾರಣದಿಂದಾಗಿ ಬಾಕಿ ಇರುವ ಪ್ರಕರಣಗಳು ತ್ವರಿತವಾಗಿ ವಿಲೇವಾರಿಯಾಗದೆ ಇರುವುದರಿಂದ ಅರ್ಜಿದಾರರಿಗೆ ಸಾಕಷ್ಟು ತೊಂದರೆಯಾಗಿದೆ.

ಅಡಚಣೆಗಳನ್ನು ನಿವಾರಿಸಿ, ದರ್ಖಾಸ್ತು ಪೋಡಿ ದುರಸ್ತಿಯಾಗಿ ಪಹಣಿ ಇಂಡೀಕರಣ ಮಾಡುವ ಪ್ರಕ್ರಿಯೆಯನ್ನು ತ್ವರಿತವಾಗಿ ಮಾಡಿ ಅರ್ಜಿದಾರರಿಗೆ ನ್ಯಾಯ ಒದಗಿಸಲು ಸರ್ಕಾರ ಇದುವರೆಗೆ ಯಾವುದೇ ಸೂಕ್ತ ಹಾಗೂ ಅಗತ್ಯ ಕ್ರಮ ವಹಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**-: ಹೇಳಿಕೆ :-**

ಸರ್ಕಾರದಿಂದ ವಿವಿಧ ರೀತಿಯಾಗಿ ಮಂಜೂರಿಯಾದ ಜಮೀನುಗಳ ಪೋಡಿ ದುರಸ್ತಿಗಾಗಿ ಕಂದಾಯ ಅಧಿಕಾರಿಗಳು ಮಂಜೂರಿ ನೈಜತೆಯನ್ನು ಖಾತರಿ ಪಡಿಸಿಕೊಂಡು ಭೌತಿಕವಾಗಿ ನಮೂನೆ 1 ರಿಂದ 5 ಭರ್ತಿ ಮಾಡಿ, ಸಂಬಂಧಿಸಿದ ಉಪ ವಿಭಾಗಾಧಿಕಾರಿಗಳು ಮತ್ತು ಭೂದಾಖಲೆಗಳ ಉಪ ನಿರ್ದೇಶಕರು ಮೇಲು ಸಹಿ ಮಾಡಿ ನಂತರ ಮೂಲ ಮಂಜೂರಿ ಕಡತವನ್ನು ಭೂಮಾಪನ ಶಾಖೆಗೆ ವರ್ಗಾಯಿಸಿದ ನಂತರ ಅಳತೆ ಕೆಲಸ ನಿರ್ವಹಿಸಿ ನಮೂನೆ 6 ರಿಂದ 10ನ್ನು ಭರ್ತಿ ಮಾಡಿ ದರಖಾಸ್ತು ಪೋಡಿ ದುರಸ್ತಿ ಪಡಿಸಲಾಗುತ್ತಿತ್ತು. ಕಡತಗಳ ನಿರ್ವಹಣೆ ಮತ್ತು ಚಲನವಲನವನ್ನು ಭೌತಿಕವಾಗಿ ನಿರ್ವಹಿಸುತ್ತಿದ್ದರಿಂದ ಈ ಪ್ರಕ್ರಿಯೆಯಲ್ಲಿ ಸಾಕಷ್ಟು ವಿಳಂಬ ಮತ್ತು ತಪ್ಪುಗಳಾಗುವ ಸಾಧ್ಯತೆ ಇದ್ದುದರಿಂದ, ಸದರಿ ತಪ್ಪು ಹಾಗೂ ವಿಳಂಬವನ್ನು ಸರಿಪಡಿಸುವ ಸಂಬಂಧ ಪರಿಶೀಲಿಸಿ, ಸರ್ಕಾರವು ಆದೇಶ ಸಂಖ್ಯೆ.ಕಂಇ 156 ಎಸ್ಎಸ್ಎಂ 2024, ದಿನಾಂಕ 25-11-2024 ರಲ್ಲಿ ನಮೂನೆ 1 ರಿಂದ 5 ಮತ್ತು 6 ರಿಂದ 10 ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಿದೆ.

ಅದರಂತೆ, ನಮೂನೆ 1 ರಿಂದ 5 ಗಳಿಗೆ ಸಂಬಂಧಿಸಿದ ಉಪ ವಿಭಾಗಾಧಿಕಾರಿಗಳು ಮತ್ತು ಭೂದಾಖಲೆಗಳ ಉಪ ನಿರ್ದೇಶಕರು ಮೇಲು ಸಹಿ ಮಾಡಬೇಕಾಗಿರುವ ಕ್ರಮವನ್ನು ರದ್ದುಪಡಿಸಿ, ಇದನ್ನು ದೃಢೀಕರಿಸುವ ಜವಾಬ್ದಾರಿಯನ್ನು ತಹಶೀಲ್ದಾರ್ ರವರಿಗೆ ಸೀಮಿತಗೊಳಿಸಿದೆ ಮತ್ತು ಸರ್ಕಾರಿ ಸರ್ವೆನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕ ಕಾಲದಲ್ಲಿ ದುರಸ್ತಿ ಪಡಿಸುವಂತೆ ಸೂಚಿಸಿದೆ.

ಕಡ್ಡಾಯವಾಗಿ ಪ್ರತಿ ಸರ್ವೆ ನಂಬರಿಗೆ ಒಂದು ಬಾರಿಗೆ ಎಲ್ಲಾ ಮಂಜೂರಿದಾರರಿಗೆ ಏಕಕಾಲಕ್ಕೆ ನಮೂನೆ 1 ರಿಂದ 5 ಗಳನ್ನು ಭರ್ತಿ ಮಾಡಿ ಡಿಜಿಟಲ್ ಮೇಲು ಸಹಿ ಮಾಡಲು & ಅದೇ ರೀತಿ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಸಹ ಆನ್‌ಲೈನ್‌ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ.

ಈ ಹಿಂದೆ ಯಾವುದೇ ಭೂಮಂಜೂರಿ ಕಡತದಲ್ಲಿ ಪೋಡಿಗೆ ಅಗತ್ಯವಿದ್ದ ಕನಿಷ್ಠ 5 ದಾಖಲೆಗಳನ್ನು 3 ಕ್ಕೆ ಇಳಿಸಲಾಗಿದೆ. ಅದರಂತೆ ತಹಶೀಲ್ದಾರರು ಮಂಜೂರಿ ನೈಜತೆಯನ್ನು ಪರಿಶೀಲಿಸಿಕೊಂಡು ಅಳತೆಗಾಗಿ ಅನುಬಂಧ-1 ರಂತೆ ಅಧಿಕೃತ ಜ್ಞಾಪನವನ್ನು ಆನ್‌ಲೈನ್ ನಲ್ಲಿ ಅಳತಗೆ ಒದಗಿಸಲು, ನಂತರ 30 ದಿನಗಳಲ್ಲಿ ಸರ್ವೆ ಅಧಿಕಾರಿಗಳು ಅರ್ಹ ಪ್ರಕರಣಗಳಲ್ಲಿ ಅಳತೆ ಕೈಗೊಂಡು ಪೋಡಿ ದುರಸ್ತಿ ಪಡಿಸಲು ಸೂಚಿಸಲಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಯಾವುದೇ ತೊಡಕುಗಳು ಸಂಭವಿಸಿರುವುದಿಲ್ಲ.

ನವೆಂಬರ್-2024 ರಿಂದ ನವೆಂಬರ್ 2025 ಅಂತ್ಯಕ್ಕೆ ಆನ್‌ಲೈನ್ ಮೂಲಕ ತಂತ್ರಾಂಶದಲ್ಲಿ ಒಟ್ಟು 1,50,729 ಮಂಜೂರಿದಾರರ ನೈಜತೆಯನ್ನು ಖಾತರಿಪಡಿಸಿಕೊಂಡು ನಮೂನೆ 01 ರಿಂದ 05 ಮತ್ತು ಅನುಬಂಧ-1 ದೃಢೀಕರಿಸಲಾಗಿದೆ. ತಂತ್ರಾಂಶದ ಮುಖಾಂತರ ಅಳತೆಗಾಗಿ ಒಟ್ಟು 1,24,447 ಅನುಬಂಧ-1 ಗಳು ಸ್ವೀಕೃತಿಯಾಗಿದ್ದು, ಈ ಪೈಕಿ 1,03,183 ಫಲಾನುಭವಿಗಳ ಜಮೀನು ಅಳತೆ ಮಾಡಿ, ಈ ಪೈಕಿ 50,770 ಕ್ಕೂ ಹೆಚ್ಚು ಫಲಾನುಭವಿಗಳ ಮಂಜೂರಿ ಜಮೀನು ಪೋಡಿ ದುರಸ್ತಿ ಮಾಡಿ ಕೊಡಲಾಗಿದೆ.

**<u>ಸಂಖ್ಯೆ: ಕಂಇ 210 ಎಸ್‌ಎಸ್‌ಸಿ 2025</u>**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು